ISBN : 978-93-83813-42-1

ಕೆ.ಎಲ್.ಇ. ಸಂಸ್ಥೆಯ ಎಸ್.ಕೆ. ಕಲಾ ಮಹಾವಿದ್ಯಾಲಯ ಮತ್ತು
ಎಚ್. ಎಸ್. ಕೆ. ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

# ಸ್ವಾತಂತ್ರ್ಯ ಸಂಗ್ರಾಮ ಮತ್ತು ಕನ್ನಡ ಸಾಹಿತ್ಯ

## Swaatantrya Sangraam & Kannada Saahitya..

(Papers Presented in International Seminar)



ಸಂಪಾದಕರು

ಡಾ. ವಿದ್ಯಾವತಿ ರಜಪೂತ
ಡಾ. ಎಸ್. ಟಿ. ಮೇರವಾಡೆ
ಡಾ. ಆರ್. ವಿ. ಪಾಟೀಲ
ಪ್ರೊ. ಬಿ. ಬಿ. ಡೆಂಗನವರ

Scanned with CamScanner

# ಪರಿವಿಡಿ


1. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯಕಾರರ ಧ್ವನಿ 1

● ಡಾ. ಎಸ್. ಟಿ. ಮೇರವಾಡ

2. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 5

● ಪ್ರದೀಪ ಎಂ. ಡಿ.

3. ಸಾಹಿತ್ಯ ಮತ್ತು ಪ್ರಕೃತಿ 12

● ಡಾ. ದಾಕ್ಷಾಯಣಮ್ಮ ಎಂ.

4. ಸ್ವಾತಂತ್ರ್ಯ ಚಳುವಳಿ ಮತ್ತು ಮುಸ್ಲಿಂ ಮಹಿಳೆಯರು 17

● ಡಾ. ಮುಮ್ತಾಜ್‌ಬೇಗಂ ಗಂಗಾವತಿ

5. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ 22

● ಶ್ರೀಮತಿ ಶಶಿಕಲಾ ಎಸ್. ಆದೆಪ್ಪನವರ

6. ಜನಪದ ಸಾಹಿತ್ಯ: ಲಾವಣಿಗಳಲ್ಲಿ ಸ್ವಾತಂತ್ರ್ಯದ ಧ್ವನಿ 27

● ಸುಶೀಲಾದೇವಿ ಬಿ. ಬೇಟಗೇರಿ

7. ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಸಂವೇದನೆ 33

● ಡಾ. ಹೆಚ್. ರಾಜೇಶ್ವರಿ

8. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಸಾಹಿತ್ಯ ಹಾಗೂ ಪತ್ರಿಕೋದ್ಯಮ 38
ಜನಪದ ಲಾವಣಿಗಳು : ಹೋರಾಟದ ಭಿನ್ನ ಬಗೆ

● ಡಾ. ಜ್ಯೋತಿ ನಾಗರಾಜ್ ಹೊಸೂರಕರ್

9. ಸ್ವಾತಂತ್ರ್ಯ ಸಂದರ್ಭದಲ್ಲಿ ಆಧುನಿಕತೆ 44

● ಶ್ರೀಮತಿ ಮೀನಾಕ್ಷಿ ಪಾಟೀಲ

10. ಸ್ವಾತಂತ್ರ್ಯ ಹೋರಾಟಗಾರ : ಪರಪ್ಪ ಸಂ. ಸಜ್ಜನ (ಬೇವೂರ) 49

● ಡಾ. ಜಿ. ಆಯ್. ನಂದಿಕೋಲಮಠ

11. ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳ ಪಾತ್ರ 55

● ಡಾ. ಶೀಲಾದೇವಿ ಎಸ್. ಮಳೀಮಠ

● ಮಹೇಶ್ವರಿ ಜಿ. ಬಿ.

12. ಮಹಿಳಾ ಸ್ವಾತಂತ್ರ ಹೋರಾಟಗಾರ್ತಿ–ಸರೋಜಿನಿ ನಾಯ್ಡು 60

● ಶ್ರೀಮತಿ ಜಗದೇವಿ ಎಂ. ಕಲಶೆಟ್ಟಿ

13. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 66

● ಶ್ರೀಮತಿ ಸವಿತಾ ಸಿ. ಸಿದ್ದೂನವರ


Scanned with CamScanner

14. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ 71
● ಕು. ಪಲ್ಲವಿ ತುಗವ

15. ಭಾರತದ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಗಳು 73
● ಸಾವಿತ್ರಿ ಎಸ್. ಕೊಪ್ಪಳ

16. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು 77
● ಡಾ. (ಶ್ರೀಮತಿ) ವಿದ್ಯಾ ಹಡಗಲಿ

17. ಜನಪದ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಕಹಳೆ ಊದಿದ ಕಿತ್ತೂರು 82
● ಶ್ರೀಮತಿ ಸುಮಾ, ವಸಂತ, ಸಾವಂತ

18. ಸ್ವತಂತ್ರ ಹೋರಾಟದ ಸಂದರ್ಭದಲ್ಲಿ ವಿಷ್ಣುನಾಯ್ಕರ ಸಾಹಿತ್ಯ ಕೃತಿಗಳ ಅವಲೋಕನ 86
● ಓಂಕಾರ ನಾಯ್ಕ್ ಜಿ.

19. ಜನಪದ ಲಾವಣಿಗಳಲ್ಲಿ ರಾಷ್ಟ್ರೀಯತೆ 90
● ಡಾ. ವೀರಪ್ಪ ಪೂಜಾರ

20. ಕನ್ನಡ ಲಾವಣಿಗಳಲ್ಲಿ ವೀರ ಸಂಗೊಳ್ಳಿ ರಾಯಣ್ಣ 94
● ಡಾ. ಮಹಾಲಿಂಗಪ್ಪ ಹೊಳೆಯಣ್ಣನವರ

21. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಮೂಹ ಮಾಧ್ಯಮಗಳ(ಪತ್ರಿಕೆ) ಪಾತ್ರ 98
● ರಾಮರೆಡ್ಡಿ ಕೆ.

22. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಕೊಡುಗೆ 101
● ವಿಜಯಲಕ್ಷ್ಮೀ ಅಂಬಿ

23. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ 105
● ರೇಷ್ಮಾ ಟಿ. ಎಸ್.

24. ಸ್ವಾತಂತ್ರ್ಯ ಸಂಗ್ರಾಮದಲ್ಲಿ–ಕನ್ನಡಿಗರ ಪಾತ್ರ 108
● ಡಾ. ದೊಡ್ಡಮನಿ ಲೋಕರಾಜ

25. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ವೀರಮಹಿಳೆ ಸರೋಜಿನಿ ನಾಯ್ಡು 111
● ಡಾ. ಭಾರತಿ ಎಸ್. ಗದ್ದಿ

26. ಸ್ವಾತಂತ್ರ್ಯ ಹೋರಾಟದಲ್ಲಿ ಸಾಹಿತ್ಯದ ಪಾತ್ರ 115
● ಪುರುಷೋತ್ತಮ ಎಸ್. ವಿ.

Scanned with CamScanner

27. ತುಳುನಾಡ ಗಾಂಧಿ ಕಾರ್ನಾಡ್ ಸದಾಶಿವರಾಯರು 119

● ರೂಪ ಜಿ. ಕೆ.

28. ತ.ರಾ.ಸು ಕಾದಂಬರಿಗಳಲ್ಲಿನ ಸ್ವಾತಂತ್ರ್ಯ ಹೋರಾಟ 122

● ಬಸವರಾಜ ಹಲಕುರ್ಕಿ

29. ಸ್ವಾತಂತ್ರ್ಯ ಸಂಗ್ರಾಮ – ಸಾಹಿತ್ಯಿಕ ಕೊಡುಗೆಗಳು 126

● ಡಾ. ಚಾಮರಾಜ ಎಸ್. ಕಮ್ಮಾರ

30. ಹಾವೇರಿ ಜಿಲ್ಲೆಯ ಸ್ವಾತಂತ್ರ್ಯಹೋರಾಟಗಾರರ ಶೈಕ್ಷಣಿಕ ಕೊಡುಗೆಗಳು 131

● ಡಾ. ಹೇಮಪ್ಪ ಬ. ಕೆಂಚಳ್ಳಿ

31. ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಗಾಂಧೀಜಿ 135

● ಡಾ. ಎಸ್. ಬಿ. ಬಸೆಟ್ಟಿ

32. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಭಾಸ್ ಚಂದ್ರ ಬೋಸ್ 138

● ಪ್ರೊ. ಆಯ್. ಎಸ್. ಹಳ್ಳಿಕೇರಿ

33. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 143

● ಪುಷ್ಪಲತಾ ಕೆ. ಪಿ.

34. ಸ್ವಾತಂತ್ರ್ಯ ಹೋರಾಟದಲ್ಲಿ ಧಾರವಾಡ ತಾಲೂಕಿನ ಮಹಿಳೆಯರ ಪಾತ್ರ 147

● ಡಾ. ಶಾಂತವ್ವ ಕೆ. ಪೂಜಾರ

35. ಲಾವಣಿ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ-ಕಿತ್ತೂರು ಚೆನ್ನಮ್ಮ 152

● ಡಾ. ಪೂರ್ಣಿಮಾ ಶ್ರೀರಾಮ ನಾಡಗೀರ

36. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ 156

● ಕುಬೇರ ನಾಯ್ಕ ಬಿ.

37. ನಿರಂಜನರ ಚಿರಸ್ಮರಣೆ ಕಾದಂಬರಿಯಲ್ಲಿ ಸ್ವಾತಂತ್ರ್ಯ ಹೋರಾಟದ ಅಸ್ಮಿತ 162

● ಸಂತೋಷ ಹೆಚ್. ಎಸ್.

38. ನವ ಭಾರತ ಹಾಗೂ ಬ್ರಿಟಿಷ ವಸಾಹತುಶಾಹಿ 168

● ಪ್ರೊ. ಬಿ. ಬಿ. ಡೆಂಗನವರ

39. ಸ್ವಾತಂತ್ರ್ಯ ಸಂಗ್ರಾಮ ಹಾಗೂ ರಾಷ್ಟ್ರಕವಿ ಕುವೆಂಪು ಒಂದು ಅವಲೋಕನ 173

● ಪ್ರೊ. ಮಾರುತಿ

Scanned with CamScanner

27. ತುಳುನಾಡ ಗಾಂಧಿ ಕಾರ್ನಾಡ್ ಸದಾಶಿವರಾಯರು 119

● ರೂಪ ಜಿ. ಕೆ.

28. ತ.ರಾ.ಸು ಕಾದಂಬರಿಗಳಲ್ಲಿನ ಸ್ವಾತಂತ್ರ್ಯ ಹೋರಾಟ 122

● ಬಸವರಾಜ ಹಲಕುರ್ಕಿ

29. ಸ್ವಾತಂತ್ರ್ಯ ಸಂಗ್ರಾಮ – ಸಾಹಿತ್ಯಿಕ ಕೊಡುಗೆಗಳು 126

● ಡಾ. ಚಾಮರಾಜ ಎಸ್. ಕಮ್ಮಾರ

30. ಹಾವೇರಿ ಜಿಲ್ಲೆಯ ಸ್ವಾತಂತ್ರ್ಯಹೋರಾಟಗಾರರ ಶೈಕ್ಷಣಿಕ ಕೊಡುಗೆಗಳು 131

● ಡಾ. ಹೇಮಪ್ಪ ಬ. ಕೆಂಚಳ್ಳಿ

31. ಭಾರತದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಗಾಂಧೀಜಿ 135

● ಡಾ. ಎಸ್. ಬಿ. ಬಸೆಟ್ಟಿ

32. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುಭಾಸ್ ಚಂದ್ರ ಬೋಸ್ 138

● ಪ್ರೊ. ಆಯ್. ಎಸ್. ಹಳ್ಳಿಕೇರಿ

33. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 143

● ಪುಷ್ಪಲತಾ ಕೆ. ಪಿ.

34. ಸ್ವಾತಂತ್ರ್ಯ ಹೋರಾಟದಲ್ಲಿ ಧಾರವಾಡ ತಾಲೂಕಿನ ಮಹಿಳೆಯರ ಪಾತ್ರ 147

● ಡಾ. ಶಾಂತವ್ವ ಕೆ. ಪೂಜಾರ

35. ಲಾವಣಿ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ–ಕಿತ್ತೂರು ಚೆನ್ನಮ್ಮ 152

● ಡಾ. ಪೂರ್ಣಿಮಾ ಶ್ರೀರಾಮ ನಾಡಗೀರ

36. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ 156

● ಕುಬೇರ ನಾಯ್ಕ ಬಿ.

37. ನಿರಂಜನರ ಚಿರಸ್ಮರಣೆ ಕಾದಂಬರಿಯಲ್ಲಿ ಸ್ವಾತಂತ್ರ್ಯ ಹೋರಾಟದ ಅಸ್ಮಿತೆ 162

● ಸಂತೋಷ ಹೆಚ್. ಎಸ್.

38. ನವ ಭಾರತ ಹಾಗೂ ಬ್ರಿಟಿಷ ವಸಾಹತುಶಾಹಿ 168

● ಪ್ರೊ. ಬಿ. ಬಿ. ಡೆಂಗನವರ

39. ಸ್ವಾತಂತ್ರ್ಯ ಸಂಗ್ರಾಮ ಹಾಗೂ ರಾಷ್ಟ್ರಕವಿ ಕುವೆಂಪು ಒಂದು ಅವಲೋಕನ 173

● ಪ್ರೊ. ಮಾರುತಿ

Scanned with CamScanner

# ನವ ಭಾರತ ಹಾಗೂ ಬ್ರಿಟಿಷ ವಸಾಹತುಶಾಹಿ

● ಪ್ರೊ. ಬಿ. ಬಿ. ಡೆಂಗನವರ

ಸಾಹಿತ್ಯ ಜನ ಜೀವನದ ಪ್ರತಿಬಿಂಬ ಮತ್ತು ಗತಿಬಿಂಬವೆಂದು ಹೇಳುವ ವಾಡಿಕೆಯಿದೆ. ಜನ ಜೀವನವನ್ನು ರೂಪಿಸುವ ಸಮಾಜದ ಸ್ವರೂಪವನ್ನು ಆರ್ಥಿಕ ಕಾರಣಗಳು ನಿರ್ಣಯಿಸುತ್ತವೆ. ಒಂದು ದೇಶದ ಆರ್ಥಿಕ, ರಾಜಕೀಯ ವ್ಯವಸ್ಥೆಯಲ್ಲಿ ಮೂಲಭೂತ ಪರಿವರ್ತನೆಗಳಾದಾಗ ಅದನ್ನು ಅನುಲಕ್ಷಿಸಿ ಜನಜೀವನವು ಮಾರ್ಪಾಡಾಗಿರುವುದು ಇತಿಹಾಸದಲ್ಲಿ ಕಂಡು ಬರುತ್ತದೆ. ಜೀವಂತ ಸಾಂಸ್ಕೃತಿಕ ಪರಂಪರೆಯನ್ನುಳ್ಳ ಸಮಾಜವನ್ನು ಮೂಲಭೂತವಾಗಿ ಬದಲಾವಣೆಗೆ ಗುರಿಪಡಿಸುವಂತಹ ಆರ್ಥಿಕ, ರಾಜಕೀಯ ಕ್ರಾಂತಿಗಳು ನಡೆಯುವುದು ತೀರಾ ವಿರಳ, ಅಲ್ಲದೆ ಒಂದು ದೇಶದ ಜನಜೀವನವನ್ನು ರೂಪಿಸುವಲ್ಲಿ ಸಮಕಾಲೀನ ಆರ್ಥಿಕ, ರಾಜಕೀಯ ಸಂಗತಿಗಳಂತೆ ಪರಂಪರಾಗತ ನಂಬಿಕೆ ವಿಚಾರಗಳೂ ಪಾತ್ರ ವಹಿಸುತ್ತವೆ. ಆದುದರಿಂದ ಸಾಹಿತ್ಯ ಪರಂಪರೆ ಅಂದಂದಿನ ಸಮಾಜವನ್ನು ಪ್ರತಿಬಿಂಬಿಸುವುದಲ್ಲದೆ ಪರಂಪರಾಗತ ಸ್ಮೃತಿಯನ್ನು ತನ್ನೊಳಗೆ ಅಡಗಿಸಿಟ್ಟು ಕೊಂಡಿರುತ್ತದೆ. ಕಾಲದಿಂದ ಕಾಲಕ್ಕೆ ಹಳೆತು ಹೊಸತರ ಘರ್ಷಣೆ, ಒಂದು ಕಾಲಕ್ಕೆ ಆಧುನಿಕವಾಗಿ ಕಂಡಿದ್ದು ಮುಂದೆ ಸಂಪ್ರದಾಯವಾಗಿ ಬಿಡಬಹುದು. ರಾಜಕೀಯ ಇತಿಹಾಸದಲ್ಲಿ ಮತ್ತು ಸಾಹಿತ್ಯ ಕಲೆಗಳ ಇತಿಹಾಸದಲ್ಲಿ ಹಿಂದೆ ನಡೆದ ಪರಿವರ್ತನೆಗಳಿಗೂ ಇಪ್ಪತ್ತೇನೆ ಶತಮಾನದಲ್ಲಿ ನಡೆದ ಅಮೂಲಾಗ್ರ ಬದಲಾವಣೆಗೂ ಇರುವ ಸ್ಪಷ್ಟ ವ್ಯತ್ಯಾಸ ಗಮನಾರ್ಹವಾದುದ್ದು. ಆಯಾ ಕಾಲದ ಸಾಹಿತ್ಯ ಪರಿವರ್ತನೆಗೆ ಹಿಂದಿನ ಕಾಲದ ಸಾಹಿತ್ಯ ಮತ್ತು ಜೀವನದಲ್ಲಿ ಬೀಜಾಂಕುರವಿದ್ದುದನ್ನು ಸ್ಪಷ್ಟವಾಗಿ ಕಾಣಬಹುದು.

ಡಾರ್ವಿನ್ನನ ಜೀವವಿಕಾಸವಾದ ಫ್ರಾಯ್ಡನ ಮನೋವೈಜ್ಞಾನಿಕ ಸಂಶೋಧನೆಗಳು ಮತ್ತು ಕಾರ್ಲ್‌ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತಗಳು ಪಾಶ್ಚಾತ್ಯ ಜಗತ್ತಿನ ವಿಚಾರಧಾರೆಯನ್ನು ಮೂಲಭೂತವಾಗಿ ಪ್ರಭಾವಿಸಿದ ಫಲವಾಗಿ ಆಧುನಿಕ ಯುಗದ ವೈಚಾರಿಕತೆ ರೂಪುಗೊಂಡಿತು. ಮೊದಲನೆ ಮಹಾಯುದ್ಧ ಮತ್ತು ರಷ್ಯಾದ ಮಹಾನ್ ಕ್ರಾಂತಿ ಈ ಶತಮಾನದ ಆದಿಭಾಗದಲ್ಲಿ ಜೀವನ ದೃಷ್ಟಿಯನ್ನು ರೂಪಿಸಿದ ಎರಡು ಮಹತ್ವದ ಸಂಗತಿಗಳು.

ಹಿಮಾಲಯ ಪರ್ವತವು ಭಾರತವನ್ನು ಕೋಟೆಗೋಡೆಯಂತೆ ರಕ್ಷಿಸಿದರೂ ಸಮುದ್ರ ಮಾರ್ಗದಿಂದ ಪಾಶ್ಚಾತ್ಯರು ಪ್ರವೇಶಿಸಿದರು. ವಾಸ್ಕೋಡಗಾಮನ

Scanned with CamScanner

ಪ್ರವೇಶದೊಂದಿಗೆ ಈ ದೇಶವು ತನ್ನ ಭೌಗೋಳಿಕ ಪ್ರತ್ಯೇಕತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿತು. ಪ್ಲೇಟೊ, ಪೋರ್ಚುಗಿಸರು, ಡಚ್ಚರು ಭಾರತದೊಂದಿಗೆ ವ್ಯಾಪಾರ ಸಂಪರ್ಕವನ್ನು ಸ್ಥಾಪಿಸಿದರು. ಆ ಮೇಲೆ ಬಂದ ಇಂಗ್ಲೀಷ ವರ್ತಕರಿಂದ "ಈಸ್ಟ್ ಇಂಡಿಯಾ ಕಂಪನಿ" ಎಂಬ ವ್ಯಾಪಾರಿ ಸಂಸ್ಥೆ ಉದಯವಾಯಿತು.

1857–58ರಲ್ಲಿ ನಡೆದ ಸಿಪಾಯಿ ದಂಗೆಯ ಬಳಿಕ ಬ್ರಿಟೀಷ ಸರಕಾರವು ಭಾರತದ ಆಡಳಿತವನ್ನು ನೇರವಾಗಿ ವಹಿಸಿಕೊಂಡಿಂತು. ಹೊಸ ಆಡಳಿತ ವ್ಯವಸ್ಥೆಯನ್ನು ಭದ್ರಪಡಿಸಲು ವ್ಯಾಪಕವಾದ ಅಂಚೆ ಮತ್ತು ತಂತಿ ವ್ಯವಸ್ಥೆಯನ್ನು ಭಾರತದ ಕಚ್ಚಾ ವಸ್ತುಗಳನ್ನು ತಮ್ಮ ದೇಶಕ್ಕೆ ರವಾನೆ ಮಾಡಲು ಭಾರತದ ಬಂದರುಗಳಿಗೆ ದೇಶದ ಮೂಲೆ ಮೂಲೆಯಿಂದ ಸಂಪರ್ಕವನ್ನು ಕಲ್ಪಿಸಲಾಯಿತು. ಇದರಿಂದ ಹಲವಾರು ಸಾವಿರ ಮೈಲಿ ರಸ್ತೆ ಸಾರಿಗೆ ಮಾರ್ಗಗಳು, ಜಲಯಾಣ ಸಂಪರ್ಕಗಳು, ರೈಲು ಮಾರ್ಗಗಳು ನಿರ್ಮಾಣಗೊಂಡವು. ದಕ್ಷ ಆಡಳಿತ ವಿತರಣೆಗಾಗಿ ಎಲ್ಲ ರಾಜ್ಯಗಳಲ್ಲಿ ಸರಕಾರಿ ನೌಕರಶಾಹಿ ಅಸ್ತಿತ್ವಕ್ಕೆ ಬಂದಿತು. ಮಧ್ಯಮದರ್ಜೆಯ ಅಧಿಕಾರಿಗಳು, ಕೆಳದರ್ಜೆಯ ಗುಮಾಸ್ತರ ಮುಖಾಂತರ ಹುದ್ದೆಗಳಲ್ಲಿ ಭಾರತೀಯರಿಗೆ ಹೆಚ್ಚಿನ ಅವಕಾಶ ದೊರೆತವು. ರೈಲು ಸಂಪರ್ಕಗಳನ್ನು ಹೆಚ್ಚು ವಿಸ್ತರಿಸಿದ ಪರಿಣಾಮವಾಗಿ ಔದ್ಯೋಗಿಕ ರಂಗದಲ್ಲಿ ಪ್ರಗತಿ ತ್ವರಿತಗೊಂಡಿತು. ಹೀಗೆ ಭಾರತದಲ್ಲಿ ಮೊತ್ತಮೊದಲಬಾರಿಗೆ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದ ವೇಳೆಗೆ ಒಂದು ಹೊಸ ವರ್ಗ ಅಸ್ತಿತ್ವಕ್ಕೆ ಬಂದಿತ್ತು. ಸರ್ಕಾರಿ ನೌಕರರು, ಕಾರ್ಖಾನೆ ಕೂಲಿಗಾರರ, ಮಧ್ಯಮ ವರ್ಗದ ವ್ಯಾಪಾರಿಗಳು ಇವರೆಲ್ಲ ಭಾರತದ ಮಧ್ಯಮ ವರ್ಗದ ಜನತೆಯೆಂದು ಪರಿಗಣಿಸಲ್ಪಟ್ಟರು. ಸರ್ಕಾರದಲ್ಲಿ ನೌಕರಿ ಪಡೆಯಲು ಇಂಗ್ಲೀಷ ವಿಧ್ಯಾಭ್ಯಾಸ ಅಗತ್ಯ ವಿದ್ದ ಕಾರಣ ಈ ವರ್ಗದ ಜನತೆ ಇಂಗ್ಲೀಷ ಭಾಷೆಯ ಜೊತೆಗೆ ಆಳರಸರ ನಾಗರಿಕತೆ ಸಂಪೂರ್ಣ ಅನುರಣೆಗೂ ತೊಡಗಿದರು. ಮಧ್ಯಮ ವರ್ಗದ ಉದಯ ಆಧುನಿಕ ಭಾರತದ ಮತ್ತೊಂದು ವಿಶೇಷತೆ ಭಾರತದಲ್ಲಿ ಮೊದಲು ಇಂಗ್ಲೀಷ ಕಲಿತವರು; ಇಂಗ್ಲೀಷ ಸಾಹಿತ್ಯ ತತ್ವಜ್ಞಾನ, ರಾಜನೀತಿಶಾಸ್ತ್ರಗಳನ್ನು ಅಭ್ಯಸಿಸಿ ಉದಾರವಾದಿ ದೋರಣೆಗಳನ್ನು ಸಮಾಜದಲ್ಲಿ ಬಿಂಬಿಸಿದವರು; ರಾಷ್ಟ್ರೀಯ ಐಕ್ಯತೆಗೆ ಕಾರಣರಾಗಿ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ತರವಾದ ಪಾತ್ರವಹಿಸಿದವರು ಭಾರತದ ಆಧುನಿಕ ಸಾಹಿತ್ಯದ ಬಹುಪಾಲು ಲೇಖಕರು. ಈ ವರ್ಗಕ್ಕೆ ಸೇರುತ್ತಾರೆ. ಮಧ್ಯಮ ವರ್ಗವು ಹೆಚ್ಚು ಹೆಚ್ಚು ವಿಸ್ತಾರಗೊಂಡಂತೆ ಭಾರತವು ಆಧುನಿಕ ವಲಯವನ್ನು ಪ್ರವೇಶಿಸಿದ್ದು ಸ್ವಾಭಾವಿಕವಾಗಿದೆ. ಯಾವುದೇ ಕಾಲ ದೇಶಗಳಲ್ಲಿ ಮಧ್ಯಮ ವರ್ಗವು ಬಲಿಷ್ಠವಾದಾಗ ಜನತೆಯಿಂದ ಸಾಹಿತ್ಯ ಕಲೆಗಳಿಗೆ ವಿಶೇಷ ಪ್ರೋತ್ಸಾಹ ದೊರೆಯುತ್ತದೆ.

Scanned with CamScanner

ಸಮಗ್ರ ಭಾರತವು ರಾಜಕೀಯವಾಗಿ ಒಂದುಗೂಡಲು ಬ್ರಿಟೀಷರೇ ಕಾರಣವಾಗಿ ಆಧುನಿಕ ಭಾರತೀಯ ಕಲ್ಪನೆಗಳು ತ್ವರಿತವಾಗಿ ರೂಪಗೊಳ್ಳಲು ಸಾಧ್ಯವಾಯಿತು. ಸಾಂಸ್ಕೃತಿಕವಾಗಿ ಒಂದಾಗಿದ್ದ ಭಾರತ, ರಾಜಕೀಯವಾಗಿಯೂ ಒಂದಾಯಿತು. ಭಾರತದ ರಾಷ್ಟ್ರೀಯತೆಗೆ ಚಾಲನೆ ಕೊಟ್ಟವರು ಪರೋಕ್ಷವಾಗಿ ಇಂಗ್ಲೀಷರು. ಈ ರಾಷ್ಟ್ರೀಯತೆಯೇ ಮುಂದೆ ವಸಾಹತುಶಾಹಿಯ ವಿರುದ್ಧ ಪ್ರಬಲ ಅಸ್ತ್ರವಾಗಿ ಪರಿಣಮಿಸಿದ್ದು, ಮಾತ್ರ ಬ್ರಿಟಿಷರ ಪಾಲಿಗೆ ಕಠೋರ ವ್ಯಂಗವಾಗಿದ್ದರಬಹುದು.

ಭಾರತದ ನವೋದಯ ಚಳುವಳಿಯ ನಾಯಕತ್ವ ವಹಿಸಿದ ಧೀಮಂತರಲ್ಲಿ ಬಂಗಾಳಿಗಳದೆ ಮೇಲುಗೈ, ರಾಜಾರಾಂ ಮೋಹನರಾಯ್, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಈಶ್ವರಚಂದ್ರ ವಿದ್ಯಾಸಾಗರ, ದೇವೇಂದ್ರನಾಥ ಠಾಕೂರ್, ರವೀಂದ್ರನಾಥ ಠಾಕೂರ್, ಬಂಕಿಮಚಂದ್ರ ಇವರೆಲ್ಲಾ ಬಂಗಾಳಿಗಳೇ ಆಗಿದ್ದರು, ಈ ಎಲ್ಲ ಮಹನೀಯರು ಸಾಮಾಜಿಕ ರಂಗದಲ್ಲಿ ವಹಿಸಿದ ಪಾತ್ರ ಸಾಕಷ್ಟು ಪ್ರಭಾವ ಬೀರಿತು.

ಆಧುನಿಕ ಭಾರತದ ಮೊದಲ ಧೀಮಂತ ನಾಯಕರತ್ನವೆಂದರೆ ರಾಜಾರಾಮ್ ಮೋಹನರಾಯ್, ಹದಿನೆಂಟನೆ ಶತಮಾನದ ಉತ್ತರಾರ್ಧ ಮತ್ತು ಮತ್ತೊಂಬತ್ತನೆ ಶತಮಾನದ ಪೂವಾರ್ಧದಲ್ಲಿ ಜೀವಿಸಿದ್ದ ಈ ವ್ಯಕ್ತಿ ಪಾಶ್ಚಾತ್ಯ ಸಾಹಿತ್ಯ, ತತ್ವಶಾಸ್ತ್ರ ಮತ್ತು ಧಾರ್ಮಿಕ ಪರಂಪರೆಯನ್ನು ಆಳವಾಗಿ ಅಭ್ಯಸಿಸಿದ್ದವರು; ಸಂಸ್ಕೃತ್, ಪರ್ಷಿಯನ್, ಅರ‍್ಯಾಬಿಕ್, ಲ್ಯಾಟಿನ್, ಇಂಗ್ಲೀಷ ಮುಂತಾದ ಹಲವು ಭಾಷೆಗಳಲ್ಲಿ ಪರಿಣಿತಿಯಿದ್ದವರು. ಶತಮಾನಗಳಿಂದ ಕುರುಡು ಆಚರಣೆಗಳಲ್ಲಿ ಮಗ್ನವಾಗಿ ಜಡವಾಗಿದ್ದ ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವಿಸಲು ಅರಿವಿನಿಂದಲೇ ಅವರು ಕಾರ್ಯತತ್ಪರರಾದದ್ದು. ಪ್ರಾಚೀನ ಉದಾತ್ತ ಮೌಲ್ಯಗಳೊಂದಿಗೆ ಪ್ರಾಶ್ಚಾತ್ಯ ಸಂಸ್ಕೃತಿಯ ಆಧುನಿಕ ಪರಿಕಲ್ಪನೆಗಳನ್ನು ಐಕ್ಯಗೊಳಿಸಿ ಉದಾರವಾದ ಹೊಸ ಜೀವನ ದೃಷ್ಟಿಯೊಂದನ್ನು ಪಡೆಯಲು ಸಾಧ್ಯವಿದೆಯೆಂದು ರಾಜಾರಾಮ್ ಮೋಹನರಾಯ್‌ರು ಭಾರತವು ತ್ವರಿತಗತಿಯಲ್ಲಿ ಮುಂದುವರೆಯಬೇಕೆಂದು ಬಯಸಿದ್ದರು.

ಭಾರತದಲ್ಲಿ ವೃತ್ತ ಪತ್ರಿಕೆಯನ್ನು ಆರಂಭಿಸಿದವರಲ್ಲಿ ರಾಜಾರಾಮ್ ಮೋಹನರಾಯ್ ಮೊದಲಿಗರು. 18ನೇ ಶತಮಾನದಲ್ಲಿ ಅವರು ಆರಂಭಿಸಿದ ಇಂಗ್ಲೀಷ–ಬಂಗಾಲಿ ದ್ವಿಭಾಷಾನಿಯತಕಾಲಿಕೆ ಮತ್ತು ಪರ್ಷಿಯನ್ ಸಾಪ್ತಾಹಿಕಗಳು ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಪ್ರಸಿದ್ಧಿ ಹೊಂದಿದವು. ಬ್ರಹ್ಮಸಮಾಜವನ್ನು ಸ್ಥಾಪನೆ ಮಾಡುವುದರ ಮೂಲಕ ಹಿಂದೂ ಧರ್ಮದಲ್ಲಿದ್ದ ಕೆಲವು ಕ್ರೂರ

Scanned with CamScanner

ಆಚರಣೆಗಳನ್ನು ಕಾನೂನು ಬದ್ಧವಾಗಿ ಪ್ರತಿಬಂಧಿಸುವಲ್ಲಿ ಯಶಸ್ವಿಯಾಗಿ ಸತಿಪದ್ಧತಿಯಂತಹ ಕೆಲವು ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕುವಲ್ಲಿ ಯಶಸ್ವಿಯಾದರು.

ಹತ್ತೊಂಬತ್ತನೆ ಶತಮಾನದಲ್ಲಿ ದಯಾನಂದ ಸರಸ್ವತಿಯವರಿಂದ ಸ್ಥಾಪಿಸಲ್ಪಟ್ಟ "ಆರ್ಯಾ ಸಮಾಜವು) ಹಿಂದೂ ಧರ್ಮದ ಜಡನೀತಿಯನ್ನು ವೇದಗಳ ಹಿನ್ನಲೆಯಲ್ಲಿ ಸುಧಾರಿಸಲು ಪ್ರಯತ್ನಿಸಿತು. ಕ್ರೈಸ್ತ, ಮುಸ್ಲೀಂ ಧರ್ಮಗಳು ಹಿಂದೂ ಧರ್ಮವನ್ನು ರಕ್ಷಿಸಲು ಪಣತೊಟ್ಟು ಆರ್ಯ ಸಮಾಜವು ಆ ಕಾಲದ ಮಧ್ಯಮವರ್ಗದ ಜನತೆಯ ಮೇಲೆ ಸಾಕಷ್ಟು ಪ್ರಭಾವ ಬೀರಿತು.

ರಾಜಾರಾಂ ಮೋಹನರಾಯ್‌ರ ಸಮಕಾಲೀನವರೇ ಆಗಿದ್ದ ಈಶ್ವರಚಂದ್ರ ವಿದ್ಯಾಸಾಗರರೂ ಬಂಗಾಳದ ಸುಪ್ರಸಿದ್ಧ ಸುಧಾರಣಾವಾದಿಗಳಲ್ಲೊಬ್ಬರು ವೇಷಭೂಷಣ ನಡುವಳಿಕೆಗಳಲ್ಲಿ ಶುದ್ಧ ಬಂಗಾಳಿಯಾಗಿದ್ದ ವಿದ್ಯಾಸಾಗರರು ಪಾಶ್ಚಾತ್ಯ ಆಧುನಿಕ ವೈಚಾರಿಕತೆ·ಮತ್ತು ವೈಜ್ಞಾನಿಕ ದೃಷ್ಟಿಯನ್ನು ಭಾರತವು ಸ್ವಾಗತಿಸಬೇಕೆಂದು ಒತ್ತಿ ಹೇಳಿದರು. ಆಧುನಿಕ ಭಾರತದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ರಾಮಕೃಷ್ಣ ಪರಮಹಂಸರ ವ್ಯಕ್ತಿತ್ವ ಅಗಾಧವಾದದ್ದು ಅವರ ಪರಮಶಿಷ್ಯರಾಗಿದ್ದ ವಿವೇಕಾನಂದರಂತೂ ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಿದ್ದವರು, ಇಂಗ್ಲೀಷ ಶಿಕ್ಷಣವನ್ನು ಪಡೆದಿದ್ದವರು. ಮತ್ತು ಹರಿತವಾದ ವೈಚಾರಿಕ ಪ್ರಖರಿತೆಯಿದ್ದವರು. ಭಾರತೀಯ ಸಂಸ್ಕೃತಿಯ ಮೂಲ ಸೆಲೆಯನ್ನು ಗುರುತ್ತಿಸಿ ಅದನ್ನು ಆಧುನಿಕ ಕಾಲಕ್ಕೆ ಪ್ರಸಕ್ತವಾಗುವಂತೆ ವ್ಯಾಖ್ಯಾನಿಸಿ ಸಮಕಾಲಿನ ಭಾರತೀಯರಲ್ಲಿ ಧೀಶಕ್ತಿಯನ್ನು ತುಂಬಿದ ವಿವೇಕಾನಂದರು ಆಧುನಿಕ ಭಾರತದ ವೈಚಾರಿಕ ಪರಂಪರೆಯಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತಾರೆ.

ರಾಜಾರಾಮ್ ಮೋಹನರಾಯ್, ದಯಾನಂದ ಸರಸ್ವತಿ, ರಾಕೃಷ್ಣ ಪರಮಹಂಸ, ವಿವೇಕಾನಂದರಂತಹವರ ಪ್ರಭಾವ ಮತ್ತು ಪ್ರಯತ್ನಗಳಿಂದಾಗಿ ಭಾರತವು ಆ ಕಾಲದಲ್ಲಿ ಸಂಪೂರ್ಣವಾಗಿ ಪಾಶ್ಚಾತ್ಯ ಸಂಸ್ಕೃತಿಗೆ ತನ್ನನ್ನು ಸಮರ್ಪಿಸಿಕೊಳ್ಳದೆ ಉತ್ತಮವಾದುದನ್ನು ಪಾಶ್ಚಾತ್ಯ ರಿಂದ ಸ್ವೀಕರಿಸಿ ನಮ್ಮ ಸಂಸ್ಕೃತಿಯನ್ನು ನವೀಕರಿಸಿಕೊಳ್ಳಬೇಕೆನ್ನುವ ತತ್ವವನ್ನು ಒಪ್ಪಿದವರಾಗಿದ್ದು ಆಧುನಿಕ ಸಮಾಜದ ನಿರ್ಮಾಣಕ್ಕೆ ದಾರಿತೋರಿಸಿದವರು. ಪಾಶ್ಚಾತ್ಯರ ಯಂತ್ರನಾಗರಿಕತೆ ಮತ್ತು ಭಾರತೀಯ ಧಾರ್ಮಿಕ ಹಿನ್ನೆಲೆಗಳೆರಡನ್ನೂ ಹೊಂದಿದ ಆಧುನಿಕ ಭಾರತದ ಕನಸನ್ನು ಸಾಕಾರಗೊಳಿಸಲು ಅವಿರಿತವಾಗಿ ಪರಿಶ್ರಮಿಸಿದರು.

ರವೀಂದ್ರನಾಥ ಠಾಕೂರರು ಭಾರತೀಯ ಸಾಹಿತ್ಯದ ನವೋದಯಕ್ಕೆ ನಾಂದಿ ಹಾಡಿದರು ಶರಚ್ಚಂದ್ರ ಚಟರ್ಜಿ ಮತ್ತು ಬಂಕಿಮ ಚಂದ್ರರೂ ಸೇರಿದರು. ಕೇವಲ

Scanned with CamScanner

ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಬದಕನ್ನು ಮೀಸಲಿಡದೆ ವಿದ್ಯಾಪ್ರಸಾರದ ಕೈಂಕರ್ಯದಲ್ಲಿ ತೊಡಗಿದರು. ಅವರು ಸ್ಥಾಪಿಸಿದ ಶಾಂತಿನಿಕೇತನವು ಭಾರತದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಮಹತ್ವದ ಸ್ಥಾನ ಪಡೆಯಿತು. ಇಪ್ಪತ್ತನೆ ಶತಮಾನದ ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಮಹಾತ್ಮಾಗಾಂಧೀಜಿಯವರನ್ನು ಬಿಟ್ಟರೆ ಜನಮಾನಸದಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದ ಕೆಲವೇ ವ್ಯಕ್ತಿಗಳಲ್ಲಿ ಶ್ರೀ ರವೀಂದ್ರರು ಪ್ರಮುಖರಾಗಿದ್ದಾರೆ. ಅವರ ವಂಶವೇ ಉದಾರವಾಧಿ ದೋರಣೆಗೆ ಮತ್ತು ಭಾರತದ ನವ ನಿರ್ಮಾಣಕ್ಕೆ ಕಂಕಣ ಬದ್ಧರಾಗಿದ್ದಾರೆ.

---

**ಮುಖ್ಯಸ್ಥರು, ಕನ್ನಡ ವಿಭಾಗ, ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ತಿಕೋಟಾ.ಮೋ:- 9902495695**


Scanned with CamScanner

**ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ**
**ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ**
**ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯ**
**ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯ**
**ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡ ನೋಡಯ್ಯ**

ಎಂಬ ವಿಶ್ವಗುರು ಬಸವಣ್ಣನವರ ನುಡಿಯಂತೆ ಜ್ಞಾನದ ಬಲದಿಂದ ಅಜ್ಞಾನವನ್ನು ಬೇರು ಸಮೇತ ಕಿತ್ತು ಬಾಳಿನಲ್ಲಿ ಜ್ಯೋತಿ ಮೂಡಿಸಲು ಶಿಕ್ಷಣ ದಾಸೋಹಕ್ಕೆ ಅಣಿಯಾಗಿ ನಿಂತ ಪ್ರಪ್ರಥಮ ಸಂಸ್ಥೆ ಕೆ.ಎಲ್.ಇ ಸಂಸ್ಥೆ. ಕರ್ನಾಟಕದ ಶಿಕ್ಷಣ ರಂಗದ ಜೀವನಾಡಿಯಾಗಿ ಸ್ಥಾಪಿತಗೊಂಡ ಈ ಸಂಸ್ಥೆಯ ಸ್ಥಾಪನೆಯ ಕಥೆಯು ರೋಮಾಂಚನ ಕಾರಿಯಾಗಿದೆ. ಒಂದು ಜನಾಂಗದ ಸೇವಾ ಭಾವ, ಸಾಹಸ ಪ್ರವೃತ್ತಿ, ತ್ಯಾಗಗಳ ಬೆವರಿನ ಕಥೆ, ಋಷಿಸದೃಶ್ಯ ಜೀವನ ನಡೆಸಿದ ಸಪ್ತ ಋಷಿಗಳ ಯಶೋಗಾಥೆಯ ಪ್ರತೀಕವೇ ಈ ಶಿಕ್ಷಣ ಸಂಸ್ಥೆ. ಇಂದು ವಿಶ್ವದಾದ್ಯಂತ ಹೆಮ್ಮರವಾಗಿ ಬೆಳೆದು ಶಿಕ್ಷಣ ಪ್ರಸಾರ ಮಾಡುತ್ತಿದೆ. ವಿಶ್ವದ ಮೂಲೆ ಮೂಲೆಗಳಲ್ಲಿಯೂ ಕೆ.ಎಲ್.ಇ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದಾರೆ. ಇಂಥ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್.ಕೆ ವಿಜ್ಞಾನ ಸಂಸ್ಥೆ ಹುಬ್ಬಳ್ಳಿಯಲ್ಲಿ ಸೆಪ್ಟಂಬರ್ 7 ಮತ್ತು 8 ರಂದು 2 ದಿನಗಳ **"ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯತೆ, ಪತ್ರಿಕೋದ್ಯಮ ಹಾಗೂ ಸಾಹಿತ್ಯದ ಪಾತ್ರ"** ಕುರಿತು ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿದ್ದು, ಈ ವಿಚಾರ ಸಂಕಿರಣದಲ್ಲಿ ವಿಭಿನ್ನ ಚರ್ಚೆಗಳ, ಪರಿಶೀಲನೆಗಳ ಅಭ್ಯಾಸ ಪೂರ್ಣ ಸಂಪ್ರಬಂಧಗಳನ್ನು ಒಳಗೊಂಡ ಕನ್ನಡ, ಹಿಂದಿ, ಇಂಗ್ಲೀಷ್, ಮರಾಠಿ ಮತ್ತು ಉರ್ದು ಭಾಷೆಗಳಲ್ಲಿ ಕೃತಿಗಳು ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಇಂತಹ ಕಾರ್ಯದಲ್ಲಿ ಪಾಲ್ಗೊಂಡಿರುವ ಸಂಯೋಜಕರಿಗೂ, ಸಂಪಾದಕರಿಗೂ ಮತ್ತು ಪ್ರಾಧ್ಯಾಪಕರಿಗೂ ಅಭಿನಂದನೆಗಳು.

ಡಾ. ಪ್ರಭಾಕರ ಕೋರೆ
ಮಾನ್ಯ ಲೋಕಸಭಾ ಸದಸ್ಯರು,
ಕಾರ್ಯಾಧ್ಯಕ್ಷರು,
ಕೆ.ಎಲ್.ಇ ಸಂಸ್ಥೆ, ಬೆಳಗಾವಿ

978-93-83813-42-1
ISBN : 978-93-83813-42-1
ಸೌಮ್ಯ ಪ್ರಕಾಶನ, ವಿಜಯಪುರ



Scanned with CamScanner